MANGALORE MARKET REPORTS

MMR MEDIA Since 1975

REGD. OFFICE :
QUICK MARKET REPORTS
Tillary Road
Mulihithlu
Mangalore - 575001
(24/7) : +91 9449074244

Vol.50 ENGLISH DAILY Subscription Yearly - Rs. - MONDAY 12-6-2023

ಮಂಗಳೂರು ಹೋಲ್‌ಸೇಲ್ ಮಾರುಕಟ್ಟೆಯ ಪ್ರಸಿದ್ಧ ಮಾರಾಟಗಾರರ ದೈನಂದಿನ ಮಾರಾಟ ದರ ಮಾಹಿತಿಯನ್ನು ನಮ್ಮ QMR APP ಮುಖಾಂತರ ಪಡೆಯಿರಿ.

Get daily price information from well-known wholesale sellers of Mangalore Market, through our QMR App.

### ಮೇ ಉತ್ಪಾದನೆ ಹೆಚ್ಚಳ, ಜೂನ್ ರಫ್ತು ಇಳಿಕೆಯಿಂದ ಮಲೇಶಿಯನ್ ಪಾಮೆಣ್ಣೆ ದರ ಇಳಿಕೆ

ಮೇ ತಿಂಗಳ ಉತ್ಪಾದನೆ ಹೆಚ್ಚಳ ಹಾಗೂ ಜೂನ್ 1–10 ರ ತನಕದ ಮಲೇಶೀಯನ್ ಪಾಮೆಣ್ಣೆ ರಫ್ತು ಇಳಿಕೆಯಿಂದ ಮಲೇಶಿಯನ್ ಪಾಮೆಣ್ಣೆ ದರ ಟನ್‌ಗೆ 30 ರಿಂಗಿಟ್ಸ್ 0.89% ಇಳಿಕೆಯಾಗಿ 3337 ರಿಂಗಿಟ್ಸ್ ($ 722.92) ಆಗಿದೆ. ಮೇ ತಿಂಗಳ ಅಂತ್ಯದ ಮಲೇಶಿಯನ್ ಪಾಮೆಣ್ಣೆ ದಾಸ್ತಾನು 12.63% ಹೆಚ್ಚಳದೊಂದಿಗೆ 1.69 ಮಿಲಿಯನ್ ಟನ್‌ಗೇರಿದೆಯೆಂದು MPOB ಹೇಳಿದೆ. ದಾಸ್ತಾನು 26.8% ಹೆಚ್ಚಳದೊಂದಿಗೆ 1.52 ಮಿಲಿಯನ್ ಟನ್ ಹಾಗೂ ರಫ್ತು 0.78% ಶೇಕಡಾ ಇಳಿಕೆಯಾಗಿ 1.08 ಮಿಲಿಯನ್ ಟನ್ ಆಗಿದೆಯೆಂದು MPOB ಹೇಳಿದೆ.

### ಭಾರತದ ಜೋಳ ರಫ್ತು ಇಳಿಕೆ ಸಾಧ್ಯತೆ

ಜಾಗತಿಕ ಉತ್ಪಾದನೆ ಹಾಗೂ ಪೂರೈಕೆ ಹೆಚ್ಚಳವಿರುವುದರಿಂದ ಈ ವರ್ಷ ಭಾರತದ ಜೋಳ ರಫ್ತು ಇಳಿಕೆಯಾಗುವ ಸಾಧ್ಯತೆಗಳಿವೆಯೆನ್ನಲಾಗಿದೆ.